ದಿಃ04.01.2025 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

<u>ಪಾಟೀ ಸವಾಲುಃ ಶ್ರೀ. ಆರ್.ಕೆ., ವಕೀಲರಿಂದ ಆರೋಪಿಗಳ ಪರವಾಗಿಃ</u>

14. ತಿಪ್ಪಗೊಂಡನಹಳ್ಳಿ ಡ್ಯಾಂನಿಂದ ದೇವಮಾಚೋಹಳ್ಳಿ ಗ್ರಾಮ ಸುಮಾರು 3 ಕಿಮೀಗಳ ಅಂತರದಲ್ಲಿರುತ್ತದೆ.

15. ನಾವು ಆದಿನ ಸ್ಥಳಕ್ಕೆ ಹೋದ ವಾಹನದ ಸಂಖ್ಯೆ ಈಗ ನನಗೆ ನೆನಪಿಲ್ಲ.

16. ಸದರಿ ವಾಹನದಲ್ಲಿ ನಾವು ಒಟ್ಟು ಎಷ್ಟು ಜನ ಹೋಗಿದ್ದೆವು ಎಂಬುದು ಈಗ ನನಗೆ ನೆನಪಿಲ್ಲ.

17. ಚಿದಾನಂದ್ ಎಂಬಾತನ ಜಮೀನಿನ ಮುಂಭಾಗದಲ್ಲಿ ಒಂದು ಸಾರ್ವಜನಿಕ ರಸ್ತೆ ಇದ್ದು ಅದರ ಮೂಲಕ ಸಾರ್ವಜನಿಕರು ಹಾಯ್ದು ಹೋಗುತ್ತಾರೆ ಎನ್ನುವುದು ಸರಿ.

18. ಸದರಿ ಚಿದಾನಂದ್ ಈತನ ಜಮೀನಿನ ಚಕ್ಕುಬಂದಿಯನ್ನು ನನಗೆ ಹೇಳಲು ಬರುವುದಿಲ್ಲ.

19. ತನಿಖಾಧಿಕಾರಿಗಳು ಆ ಸಮಯದಲ್ಲಿ ಪಂಚರನ್ನು ಹೊರತುಪಡಿಸಿ ಬೇರೆ ಯಾರನ್ನೂ ಅಲ್ಲಿ ಕರೆಸಿರಲಿಲ್ಲ.

20. ಚಿದಾನಂದ್ ಈತನ ಜಮೀನಿಂದ ಬಿಟ್ಟಾಗ ಸಮಯ ಎಷ್ಟಾಗಿತ್ತು ಎಂದು ಈಗ ನನಗೆ ಗೊತ್ತಿಲ್ಲ.

21. ಚಿದಾನಂದ್ ಈತನ ಜಮೀನಿಂದ ನಾಗನಹಳ್ಳಿ-ತಿಪ್ಪಗೊಂಡನಹಳ್ಳಿ ರಸ್ತೆ ಸುಮಾರು 3 ಕಿಮೀ ಅಂತರದಲ್ಲಿ ಇರುತ್ತದೆ.

22. ಅದು ಮಾಗಡಿ-ಬೆಂಗಳೂರು ಮುಖ್ಯರಸ್ತೆಯಾಗಿರುತ್ತದೆ ಎನ್ನುವುದು ಸರಿಯಲ್ಲ.

23. ಅಲ್ಲಿಂದ ಸದರಿ ಮಾಗಡಿ-ಬೆಂಗಳೂರು ಮುಖ್ಯರಸ್ತೆ ಸುಮಾರು 1 ಕಿಮೀ ಆಗುತ್ತದೆ.

24. ಸದರಿ ಮುಖ್ಯರಸ್ತೆಗೆ ಹೋದಾಗ ಎಷ್ಟು ಜನ ಇದ್ದರು ಎಂಬುದು ನನಗೆ ನೆನಪಿಲ್ಲ.

25. ಸದರಿ ರಸ್ತೆಯಿಂದ ಸಾಕಷ್ಟು ಜನ ಓಡಾಡಿಕೊಂಡು ಇರುತ್ತಾರೆ ಎನ್ನುವುದು ಸರಿಯಲ್ಲ.

26. ಪಂಚರನ್ನು ಮಾಗಡಿ ಪೊಲೀಸ್ ಠಾಣೆಯಿಂದಲೇ ಕರೆದುಕೊಂಡು ಹೋಗಿದ್ದೆವು.

27. ತಿಪ್ಪಗೊಂಡನಹಳ್ಳಿ ಡ್ಯಾಂ ರಸ್ತೆಯಿಂದ ಕಾಮಾಕ್ಷಿಪಾಳ್ಯ ಸುಮಾರು 25-30 ಕಿಮೀಗಳ ಅಂತರದಲ್ಲಿ ಇರುತ್ತದೆ ಎಂದರೆ 40-50 ಕಿಮೀ ಎಂದು ಹೇಳುತ್ತೇನೆ.

28. ಸುಂಕದಕಟ್ಟೆ ಮತ್ತು ತಾವರೆಕೆರೆ ದಾಟಿ ಕಾಮಾಕ್ಷಿಪಾಳ್ಯಕ್ಕೆ ಹೋಗಬೇಕಾಗುತ್ತದೆ ಎನ್ನುವುದು ಸರಿ.

29. ಸದರಿ ರಸ್ತೆಯೂ ಸಹ ಮಾಗಡಿ-ಬೆಂಗಳೂರು ರಸ್ತೆಯಾಗಿರುತ್ತದೆ ಎನ್ನುವುದು ಸರಿ.

30. ಸದರಿ ರಸ್ತೆಯಿಂದ ಜನಸಂಚಾರ ಮತ್ತು ವಾಹನ ಸಂಚಾರ ಹೆಚ್ಚಾಗಿರುತ್ತದೆ ಎನ್ನುವುದು ಸರಿ.

31. ತಿಪ್ಪಗೊಂಡನಹಳ್ಳಿ ಡ್ಯಾಂನಿಂದ ಕಾಮಾಕ್ಷಿಪಾಳ್ಯಕ್ಕೆ ಹೋಗಲು ಸುಮಾರು ಒಂದೂಕ್ಕಾಲು ಗಂಟೆ ಬೇಕಾಗುತ್ತದೆ ಎಂದರೆ, ಕೇವಲ 45 ನಿಮಿಷಗಳ ಕಾಲ ಬೇಕಾಗುತ್ತದೆ ಎಂದು ಹೇಳುತ್ತೇನೆ.

32. ಸದರಿ ಅಮಾನತ್ತುಪಡಿಸಿಕೊಂಡ ಕಾರು ಮಾರುತಿ 800 ಇದ್ದು ಅದರ ನೊಂದಣಿ ಸಂಖ್ಯೆ.ಕೆಎ-03, ಪಿ-2832 ಇತ್ತು.

33. ಅದರ ಬಣ್ಣ ನನಗೆ ನೆನಪಿಲ್ಲ.

34. ದಿಃ18.10.2016 ರಂದು ಪ್ರಸ್ತುತ ಪ್ರಕರಣಕ್ಕೆ ಸಂಬಂಧಿಸಿದಂತೆ ಮಧ್ಯಾಹ್ನ 1.30 ರಿಂದ 2.30 ರವರೆಗೆ 1 ನೇ ಮತ್ತು 2 ನೇ ಆರೋಪಿತರ ತೋರಿಕೆಯ ಮೇರೆಗೆ ಘಟನಾ ಸ್ಥಳದ ದೇವಮಾಚೋಹಳ್ಳಿ ಗ್ರಾಮದ ಚಿದಾನಂದ್ ಎಂಬಾತನ ಜಮೀನಿನಲ್ಲಿ ಮತ್ತು ಚಿಕ್ಕಣ್ಣ ಎಂಬಾತನ ಮನೆಯ ಮುಂದಿನ ರಸ್ತೆಯಲ್ಲಿ ಭೇಟಿ ನೀಡಿ ಚಾಸಾ.35 ಇವರು ಒಂದು ಸ್ಥಳ ಪಂಚನಾಮೆಯನ್ನು ಮಾಡಿದ್ದು, ಅದನ್ನು ಚಾಸಾ.35 ಇವರ ಉಕ್ತಲೇಖನದಂತೆ ನಾನು ಬರೆದಿರುತ್ತೇನೆ, ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

35. ಈಗ ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿತರಲ್ಲಿನ 1ನೇ ಆರೋಪಿತನನ್ನು ನೋಡಿ ಗುರುತಿಸುತ್ತಿದ್ದೇನೆ, ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

36. ನಂತರ, ಅದೇ ದಿನ 1ನೇ ಮತ್ತು 2ನೇ ಆರೋಪಿತರು, ಕೃತ್ಯ ಮಾಡಲು ಒಳಸಂಚು ರೂಪಿಸಿದ ಸ್ಥಳ ಎಂದು ನಾಗನಹಳ್ಳಿ ಮತ್ತು ತಿಪ್ಪಗೊಂಡನಹಳ್ಳಿ ಡ್ಯಾಂಗೆ ಹೋಗುವ ರಸ್ತೆಯಲ್ಲಿ ಕರೆದುಕೊಂಡು ಹೋಗಿ ತೋರಿಸಿದರ ಮೇರೆಗೆ, ಚಾಸಾ.35 ಇವರು ಮಧ್ಯಾಹ್ನ 2.45ರಿಂದ 3.15ರವರೆಗೆ ಒಂದು ಸ್ಥಳ ಪಂಚನಾಮೆಯನ್ನು ಮಾಡಿ, ಅದನ್ನು ಅವರ ಉಕ್ತಲೇಖನದಂತೆ ನಾನು ಬರೆದಿರುತ್ತೇನೆ, ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

37. ನಂತರ, ದಿಃ19.10.2016ರಂದು ಮಧ್ಯಾಹ್ನ 3.30 ರಿಂದ ಸಾಯಂಕಾಲ 5.00 ಗಂಟೆವರೆಗೆ ಆರೋಪಿ ನಂಬರ್ 1ರಿಂದ 4, 6ರಿಂದ 8 ಇವರ ತೋರಿಕೆಯ ಮೇರೆಗೆ ಚಾಸಾ.35 ಇವರು ನನ್ನನ್ನೂ ಸಹ ಕರೆದುಕೊಂಡು, ಆರೋಪಿತರು ಸಂಚು ರೂಪಿಸಿರುವ ಜಾಗ, ಮತ್ತು ಕೃತ್ಯಕ್ಕೆ ಉಪಯೋಗಿಸಿದ ವಾಹನಗಳು ಮತ್ತು ಮಾರಕಾಸ್ತ್ರಗಳನ್ನು ಇಟ್ಟಿರುವ ಜಾಗವಾದ ಬೆಂಗಳೂರು ನಗರದ ಕಾಮಾಕ್ಷಿಪಾಳ್ಯದ ವೃಷಭಾವತಿನಗರದಲ್ಲಿನ ಶ್ರೀ ಲಕ್ಷ್ಮೀವಲ್ಲಭ ಕಲ್ಯಾಣ

ಮಂಟಪದ ಹಿಂಬದಿಯಲ್ಲಿನ ರಸ್ತೆಗೆ ಭೇಟಿ ನೀಡಿ, ಒಂದು ವಿವರವಾದ ಪಂಚನಾಮೆಯನ್ನು ಮಾಡಿದ್ದು, ಅದನ್ನು ಚಾಸಾ.35 ಇವರ ಉಕ್ತಲೇಖನದಂತೆ ಬರೆದಿರುತ್ತೇನೆ, ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

38. ನಿ.ಪಿ.16 ರಡಿಯಲ್ಲಿ ಒಂದು ಮಾರುತಿ 800 ಕಾರ್ ಮತ್ತು ಅದರಲ್ಲಿದ್ದ 4 ಲಾಂಗ್‌ಗಳನ್ನು, ಮತ್ತು ಒಂದು ಪಲ್ಸರ್ ದ್ವಿಚಕ್ರ ವಾಹನ ಹಾಗೂ ಒಂದು ಹೊಂಡಾ ಆ್ಯಕ್ಟಿವಾ ದ್ವಿಚಕ್ರ ವಾಹನಗಳನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ, ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

39. ಸದರಿ ಅಮಾನತ್ತುಪಡಿಸಿಕೊಂಡಿದ್ದ ಮಾರುತಿ 800 ಕಾರ್, ಒಂದು ಪಲ್ಸರ್ ಹಾಗೂ ಒಂದು ಹೊಂಡಾ ಆ್ಯಕ್ಟಿವಾ ದ್ವಿಚಕ್ರ ವಾಹನಗಳನ್ನು ನೋಡಿದಲ್ಲಿ ನಾನು ಗುರುತಿಸಬಲ್ಲೆನು, ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

ಮರುವಿಚಾರಣೆಃ ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಜಿ ಡಿ ಮಹಾವರ್ಕರ್)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/
ವಿಶೇಷ ನ್ಯಾಯಾಧೀಶರು,
ರಾಮನಗರ.